

# ಪೃಥ್ವಿಯ ಕಷ್ಟದ ಬುತ್ತಿ

■ ವಿಶಾಖ ಎನ್‌.

‘ಬ್ಯಾಟ್‌ಗೂ ಪ್ಯಾಡ್‌ಗೂ ಮಧ್ಯ ಮಂಚ ಹಾಕುವಷ್ಟು ಜಾಗವಿದೆ. ಪೃಥ್ವಿ ಶಾಗೆ ಬ್ಯಾಟಿಂಗ್ ಮರೆತುಹೋಗಿದೆಯಾ?’ ಹೀಗೊಂದು ಟೀಕಾಕಾರರ ನುಡಿ ಆಸ್ಟ್ರೇಲಿಯಾದ ಅಡಿಲೇಡ್ ಟೆಸ್ಟ್‌ನಲ್ಲಿ 0 ಹಾಗೂ 4 ರನ್‌ಗಳಿಗೆ ಅವರು ಔಟಾದಾಗ ಹೊಮ್ಮಿತ್ತು. ಬೌಲರ್ ಹಾಕಿದ ಚೆಂಡು ಬ್ಯಾಟ್ ಇರುವ ಸ್ಥಳವನ್ನು ದಾಟಿ ಹೋಗುವ ಹಂತದಲ್ಲೂ ಪೃಥ್ವಿ ಶಾ ಮುಂದಿನ ಪಾದ ನೆಲಕ್ಕೆ ಅಂಟಿಕೊಂಡಿರದೇ ಇರುವುದು ಕಾಣುತ್ತಿತ್ತು. ಮುಂಬೈನ ಬ್ಯಾಟ್ಸ್‌ಮನ್‌ಷಿಪ್‌ಗೆ ತದ್ವಿರುದ್ಧವಾದ ತಂತ್ರವಿದು. ಲೋ ಗ್ರಿಪ್ ಬಳಸಿ ಅಚ್ಚರಿ ಹುಟ್ಟಿಸುವ ಹೊಡೆತಗಳನ್ನು ಹೊಡೆದಿದ್ದ ಪೃಥ್ವಿ ದಿಢೀರನೆ ಕೋವಿಡ್ ನಂತರ ಲಯ ಕಳೆದುಕೊಂಡಂತೆ ಆಡಿದ್ದರು. ಶುಭಮನ್ ಗಿಲ್, ಕೆ.ಎಲ್. ರಾಹುಲ್ ತರಹದ ಪ್ರತಿಭಾವಂತರ ಜತೆ ಟೆಸ್ಟ್ ಸ್ಥಾನಕ್ಕಾಗಿ ಹೋರಾಡಬೇಕಾದ ಅನಿವಾರ್ಯದಲ್ಲಿ ಪೃಥ್ವಿ ಇದ್ದಾರೆ. ಆ ಹೋರಾಟಕ್ಕೂ ತಾವು ಸಿದ್ಧ ಎನ್ನುವಂತೆ ವಿಜಯ್ ಹಜಾರೆ ಟ್ರೋಫಿ ಪಂದ್ಯದಲ್ಲಿ ಪುದುಚೇರಿ ತಂಡದ ವಿರುದ್ಧ ಅವರು ದ್ವಿಶತಕ ದಾಖಲಿಸಿದ್ದು ಗಮನಾರ್ಹ.

ಫೆ. 25ರಂದು ಜೈಪುರದಲ್ಲಿ ನಡೆದ ಪಂದ್ಯದಲ್ಲಿ ಮುಂಬೈನ 4 ವಿಕೆಟ್ ಕಳೆದುಕೊಂಡು 457 ರನ್ ಕಲೆಹಾಕಿತು. ಇದರಲ್ಲಿ ಪೃಥ್ವಿ ಶಾ ಕಾಣಿಕೆ ಔಟಾಗದೆ 227. ಭಾರತದಲ್ಲಿ ಏಕದಿನ ಪಂದ್ಯಗಳಲ್ಲಿ ರೋಹಿತ್ ಶರ್ಮ ಶ್ರೀಲಂಕಾ ಎದುರು ಕೋಲ್ಕತ್ತದಲ್ಲಿ 2014ರಲ್ಲಿ 264 ರನ್ ಸಿಡಿಸಿದ್ದು ಇದುವರೆಗಿನ ದಾಖಲೆ. ನಂತರದ ಸ್ಥಾನದಲ್ಲಿ ವಿಂಡೀಸ್ ವಿರುದ್ಧ ವೀರೇಂದ್ರ ಸೆಹ್ವಾಗ್ 2011ರಲ್ಲಿ 219 ರನ್ ಗಳಿಸಿದ ದಾಖಲೆ ಇತ್ತು. ಈಗ ಅದನ್ನು ಪೃಥ್ವಿ ಶಾ ಹಿಂದಿಕ್ಕಿದ್ದಾರೆ. 31 ಬೌಂಡರಿ, 5 ಸಿಕ್ಸರ್‌ಗಳಿದ್ದ ದ್ವಿಶತಕದ ಈ ಇನಿಂಗ್ಸ್‌ಗೆ ಪೃಥ್ವಿ ಆಡಿದ್ದು ಬರೀ 142 ಎಸೆತಗಳನ್ನು. ವಿಶ್ವದಲ್ಲೇ ಪ್ರಥಮ ದರ್ಜೆ ಕ್ರಿಕೆಟ್ ಪಂದ್ಯದಲ್ಲಿ ಅತ್ಯಧಿಕ ಸ್ಕೋರ್ ಇದು ಎಂಬ ಹೆಗ್ಗಳಿಕೆಯೂ ಪೃಥ್ವಿ ಅವರದ್ದಾಯಿತು.

ರಣಜಿ ಟ್ರೋಫಿ, ದುಲೀಪ್ ಟ್ರೋಫಿ ಎರಡರಲ್ಲೂ ಪದಾರ್ಪಣೆ ಪಂದ್ಯದಲ್ಲೇ ಶತಕಗಳನ್ನು ಗಳಿಸಿದ ಸಾಧನೆ ತೆಂಡೂಲ್ಕರ್ ಅವರ ಹೆಸರಿನಲ್ಲಷ್ಟೇ ಇತ್ತು. ಅದನ್ನು ನಾಲ್ಕು ವರ್ಷಗಳ ಹಿಂದೆ ಸರಿಗಟ್ಟಿದವರು ಪೃಥ್ವಿ ಶಾ.

**ಆಸ್ಟ್ರೇಲಿಯಾ ಎದುರು ಟೆಸ್ಟ್ ಸರಣಿಯಲ್ಲಿ ಕೆಟ್ಟದಾಗಿ ಆಡಿ ತಂಡದಿಂದ ಹೊರಗುಳಿದ ಪೃಥ್ವಿ ಶಾ ‘ವಿಜಯ್ ಹಜಾರೆ ಟ್ರೋಫಿ’ ಪಂದ್ಯದಲ್ಲಿ ಗಳಿಸಿರುವ ದ್ವಿಶತಕ ಅವರ ಆತ್ಮವಿಶ್ವಾಸ ಮರಳುವಂತೆ ಮಾಡಿದೆ. 21ನೇ ವಯಸ್ಸಿಗೇ ಎಷ್ಟೆಲ್ಲ ಏರಿಳಿತಗಳನ್ನು ಅವರು ಕಂಡಿದ್ದಾರೆ.**

ಮುಂಬೈನ ‘ಹ್ಯಾರಿಸ್ ಷೀಲ್ಡ್’ ಟೂರ್ನಿಯಲ್ಲಿ 546 ರನ್ ಕಲೆಹಾಕಿದಾಗ ಪೃಥ್ವಿ ಇನ್ನೂ ಹದಿನಾಲ್ಕರ ಪೋರ. 2018ರಲ್ಲಿ 19 ವರ್ಷದೊಳಗಿನವರ ತಂಡದ ನಾಯಕ ಆದರು. ರಾಹುಲ್ ದ್ರಾವಿಡ್ ಗರಡಿಯಲ್ಲಿ ಪಳಗಿದ ತಂಡದ ನೇತೃತ್ವ ವಹಿಸಿದ್ದು ಇನ್ನೊಂದು ವಿಶೇಷ. ನ್ಯೂಜಿಲೆಂಡ್‌ನಲ್ಲಿ ನಡೆದ ಜೂನಿಯರ್ ವಿಶ್ವಕಪ್‌ನಲ್ಲಿ ಪ್ರಶಸ್ತಿ ಗೆದ್ದದ್ದಷ್ಟೇ ಅಲ್ಲದೆ 65ರ ಸರಾಸರಿಯಲ್ಲಿ 261 ರನ್‌ಗಳ ಕಾಣ್ಕೆಯನ್ನೂ ಸಲ್ಲಿಸಿದ್ದರು.

ಬಾಂದ್ರಾದ ಕ್ರಿಕೆಟ್ ಮೈದಾನದಲ್ಲಿ ಮಗ ಅಚ್ಚುಕಟ್ಟಾಗಿ ಕ್ರಿಕೆಟ್ ಆಡುವುದನ್ನು ಕಲಿಯಲಿ ಎಂದೇ ಅಪ್ಪ ಪಂಕಜ್ ಶಾ ವಿರಾರ್‌ನಿಂದ ಮನೆಯನ್ನು ಸ್ಥಳಾಂತರಿಸಿದ್ದರು. ಚಿಕ್ಕಪ್ರಾಯದಲ್ಲೇ ತಾಯಿಯನ್ನು ಕಳೆದುಕೊಂಡಿದ್ದ ಪೃಥ್ವಿಗೆ ಬಾಂದ್ರಾದ ಎಂಐಜಿ ಕ್ರೀಡಾಂಗಣದಲ್ಲಿ ಅದೆಷ್ಟು ಸಲ ಆಕೆಯ ನೆನಪಾಗಿತ್ತೋ? 2010ರಲ್ಲಿ ನೀಲೇಶ್ ಕುಲಕರ್ಣಿ ಈ ಪ್ರತಿಭಾವಂತನನ್ನು ಗುರುತಿಸಿದರು. ವರ್ಷಕ್ಕೆ 3 ಲಕ್ಷ ರೂಪಾಯಿ ಒಪ್ಪಂದಕ್ಕೆ ಸಹಿ ಹಾಕಿಸಿಕೊಂಡು, ಕ್ರಿಕೆಟ್ ಪ್ರತಿಭೆಗೆ ನೀರೆರೆಯುವಂತೆ ಅವರ ಸ್ಪೋರ್ಟ್ಸ್ ಮ್ಯಾನೇಜ್‌ಮೆಂಟ್ ಕಂಪನಿಗೆ ಶಿಫಾರಸು ಮಾಡಿದರು. ಪೃಥ್ವಿಗೆ ಇಂಗ್ಲೆಂಡ್‌ನಲ್ಲಿ ಶಾಲಾ ಕ್ರಿಕೆಟ್ ಆಡುವ ಅವಕಾಶ ಸಿಕ್ಕಾಗ, ಎರಡೇ ತಿಂಗಳ ಅವಧಿಯಲ್ಲಿ 1446 ರನ್ ಗುಡ್ಡೆಹಾಕಿ ಶಹಬ್ಬಾಸ್‌ಗಿರಿ ಪಡೆದಿದ್ದರು.

ಬಾಟಂ ಹ್ಯಾಂಡೆಡ್ ಬ್ಯಾಟಿಂಗ್ ಶೈಲಿಯ ಮೂಲಕ ಗುರುತಾಗಿರುವ ಪೃಥ್ವಿ, ಹೊಡೆತಗಳ ಆಯ್ಕೆಯಲ್ಲಿ ನಿಖರತೆಯನ್ನು ಪದೇ ಪದೇ ಪ್ರದರ್ಶಿಸಿದ್ದಾರೆ. ಲೀಲಾಜಾಲವಾದ ಡ್ರೈವ್‌ಗಳಲ್ಲಿ ಅವರ ಸಹಿ ಎದ್ದುಕಾಣುತ್ತದೆ. ಲೋ ಗ್ರಿಪ್ ಬಳಸಿ ಸೊಗಸಾದ ಟೈಮಿಂಗ್‌ನಲ್ಲಿ ಅವರು ಆಡುವುದನ್ನು ಸಚಿನ್ ತೆಂಡೂಲ್ಕರ್ ಸೇರಿ ಅನೇಕ ದಿಗ್ಗಜರು ಗಮನಿಸಿ, ಮೆಚ್ಚಿಕೊಂಡಿದ್ದಾರೆ. ಎತ್ತರಕ್ಕೆ ಚೆಂಡು ಪುಟಿಯುವ ಆಸ್ಟ್ರೇಲಿಯಾದಂಥ ನೆಲದಲ್ಲಿ ಅವರು ಬ್ಯಾಕ್‌ಫೂಟ್‌ನಲ್ಲಿ ಆಡಿದ ಪರಿಯನ್ನು ಕಂಡೇ ರವಿಶಾಸ್ತ್ರಿ ಹೊಗಳಿದ್ದರು. ಸಚಿನ್, ಸೆಹ್ವಾಗ್, ಬ್ರಯಾನ್ ಲಾರಾ ಮೂವರನ್ನೂ ಬೆರೆಸಿದಂಥ ಆಟಗಾರ ಇವನು ಎಂದೇ ಅವರು ಶ್ಲಾಘಿಸಿದ್ದರು.

2018ರ ಅಕ್ಟೋಬರ್‌ನಲ್ಲಿ ವೆಸ್ಟ್‌ಇಂಡೀಸ್ ಎದುರು ಟೆಸ್ಟ್ ಆಡುವ ಅವಕಾಶ ಸಿಕ್ಕಿದ್ದೇ 99 ಎಸೆತಗಳಲ್ಲಿ ಶತಕ ಗಳಿಸಿದ ಮುಂಬೈ ಹುಡುಗ ನಿರೀಕ್ಷೆಯ ಕಣ್ಣುಗಳು ಅರಳುವಂತೆ ಮಾಡಿದ್ದನ್ನು ಕ್ರಿಕೆಟ್ ಪ್ರಿಯರು ಮರೆಯಲು ಸಾಧ್ಯವಿಲ್ಲ.

2019ರಲ್ಲಿ ಉದ್ದೀಪನ ಮದ್ದು ನಿಷೇಧದ ಶಿಕ್ಷೆ ಅವರನ್ನು ಕಾಡಿದೆ. 8 ತಿಂಗಳು ಅವರಿಗೆ ಸ್ಪರ್ಧಾತ್ಮಕ ಕ್ರಿಕೆಟ್ ಬಾಗಿಲು ಮುಚ್ಚಿತ್ತು. ಕೆಮ್ಮಿಗಾಗಿ ತೆಗೆದುಕೊಂಡ ಔಷಧದಲ್ಲಿ ನಿಷೇಧಿತ ಮದ್ದಿನ ಅಂಶ ಇರುವುದು ಅವರಿಗೆ ತಿಳಿದಿರಲಿಲ್ಲ. ಪಂದ್ಯದ ಸೂಕ್ಷ್ಮಗಳ ಕಡೆಗಷ್ಟೇ ಲಕ್ಷ್ಯ ಕೊಡುತ್ತಾ ಇಂಥ ಸಂಗತಿಗಳನ್ನು ಯಾರೋ ಗಮನಿಸುತ್ತಾರಲ್ಲ ಎಂದುಕೊಂಡ ಕ್ರೀಡಾಪಟುಗಳಿಗೆ ಈ ರೀತಿಯ ಅನುಭವ ಆಗಿರುವ ಉದಾಹರಣೆಗಳಿವೆ.

ಪೃಥ್ವಿ 21ರ ವಯಸ್ಸಿನಲ್ಲೇ ಇಷ್ಟೆಲ್ಲ ಕಷ್ಟಗಳ ಬುತ್ತಿ ಉಂಡೇ ಬ್ಯಾಟ್ ಹಿಡಿಯುತ್ತಿದ್ದಾರೆ. ಬ್ಯಾಟಿಂಗ್ ತಂತ್ರವನ್ನು ಸುಧಾರಿಸಿಕೊಂಡರೆ ರವಿಶಾಸ್ತ್ರಿ ಹೊಗಳಿಕೆಗೆ ಅರ್ಥ ದಕ್ಕುವುದರಲ್ಲಿ ಅನುಮಾನವಿಲ್ಲ.

ಪ್ರತಿಕ್ರಿಯಿಸಿ: feedback@sudha.co.in